


# ನಿದ್ದೆಗಣ್ಣುಗಳು

ಇನ್ನೂ ನಿದ್ದೆ ಬಿಟ್ಟಿರದ ಕಣ್ಣುಗಳು
–ಪ್ರತಿ ಮುಂಜಾನೆ.
ಅವು ಅಮ್ಮನವು.

ಮಧ್ಯಾಹ್ನ ಊಟ ಮುಗಿಸಿ
ಮುಸುರೆ ತೊಳೆದು
ಪತ್ರಿಕೆಯ ಪುಟಗಳ ಮೇಲೆ
ಕಣ್ಣಾಡಿಸುವ ರವಿವಾರಗಳಲ್ಲಿ
ತುಸು ವೇಳೆ ಕಳೆಯುವುದರೊಳಗೆ
ಮೂಗು ಕೆಳಗಾಗಿ
ತೂಕಡಿಸಿ ಬೀಳುತ್ತಿದ್ದಳು

ರಾತ್ರಿ
ಅಡುಗೆಮನೆ ಒರೆಸಿ
ಸೆಟೆದು ನಿಲ್ಲುವಾಗ
ಸೊಂಟ ಸಡಿಲಗೊಂಡು ಬೀಳುವಂತಾದ
ಸೀರೆ ನೆರಿಗೆಯನು ತುಳಿದು
ನಡೆಯುವಂತಾಗುತ್ತಿದ್ದಳು

ಉದ್ಯೋಗಸ್ಥೆಯೂ
ತಾಯಿಯೂ ಆದ ಮೇಲೆ
ಈಗ ನನ್ನ ಕಣ್ಣುಗಳು
ಯಾರದ್ದು ಎಂದು
ನನಗೆ ಸ್ಪಷ್ಟವಾಗಿ ಗೊತ್ತು

● ಮಂಜುಳಾ ಹಿರೇಮಠ